# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 188 (206) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಶರವಣ ಟಿ.ಎ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 10.12.2024 |
| ಉತ್ತರಿಸುವ ಸಚಿವರು | : | ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಬೆಂಗಳೂರು ನಗರ ಜಿಲ್ಲೆ, ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯ ಸೋಮಶೆಟ್ಟಿಹಳ್ಳಿ ಗ್ರಾಮದ ಗ್ರಾಮಠಾಣಾದಲ್ಲಿಇರುವ ಸರ್ಕಾರ ಅಥವಾ ಸಂಘ ಸಂಸ್ಥೆಗೆ ಸೇರಿದ ಸ್ವತ್ತುಗಳ ಸಂಖ್ಯೆ ಎಷ್ಟು ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ 2011 ಕ್ಕೆ ಒಳಪಡುವ ಸ್ವತ್ತುಗಳು) ಒತ್ತುವರಿಯಾಗಿರುವ ಸ್ವತ್ತುಗಳ ಸಂಖ್ಯೆ ಎಷ್ಟು ಮತ್ತು ಒತ್ತುವರಿದಾರರು ಯಾರು: | ಬೆಂಗಳೂರು ನಗರ ಜಿಲ್ಲೆ, ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯ ಸೋಮಶೆಟ್ಟಿಹಳ್ಳಿ ಗ್ರಾಮದ ಗ್ರಾಮಠಾಣಾದಲ್ಲಿ ಇರುವ ಸರ್ಕಾರಿ / ಸಂಘ ಸಂಸ್ಥೆಗೆ ಸೇರಿದ ಸ್ವತ್ತುಗಳ ಒಟ್ಟುಸಂಖ್ಯೆ : 05<br><br>1. ಆಂಜನೇಯಸ್ವಾಮಿ ದೇವಸ್ಥಾನ<br>2. ಮಾರಿಕಾಂಬ ದೇವಸ್ಥಾನ<br>3. ಯುವ ರೈತರ ಸಂಘ<br>4. ಸರ್ಕಾರಿ ಪಾಠಶಾಲೆ<br>5. ಬಸವಣ್ಣ ದೇವಸ್ಥಾನ,<br><br>(ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ 2011ಕ್ಕೆ ಒಳಪಡುವ ಸ್ವತ್ತುಗಳು) ಒತ್ತುವರಿಯಾಗಿರುವ ಸ್ವತ್ತುಗಳ ಸಂಖ್ಯೆ : 01<br><br>ಸೋಮಶೆಟ್ಟಿಹಳ್ಳಿ ಗ್ರಾಮಠಾಣಾ ವ್ಯಾಪ್ತಿಯಲ್ಲಿ ಎಲ್‌ಜಿಸಿ(ಪಿ)/ 60/2024ರಲ್ಲಿ ಒಂದು ಪ್ರಕರಣ ದಾಖಲಾಗಿರುತ್ತದೆ **(ಅನುಬಂಧ-1 ರಲ್ಲಿ ನೀಡಲಾಗಿದೆ).**<br><br>ಶ್ರೀ ರಂಗಪ್ಪ.ಸಿ, ಅಶೋಕ.ಎಂ, ಮತ್ತು ಲೋಕೇಶ್. ಎನ್ ರವರು ಭೂ ಕಬಳಿಕಾ ನ್ಯಾಯಾಲಯದಲ್ಲಿ, ಶ್ರೀ ಲಕ್ಷ್ಮೀಜನಾರ್ದನ್, ಲಾವಣ್ಯ ಕೋಂ ಶ್ರೀ ಲಕ್ಷ್ಮೀಜನಾರ್ದನ್, ತಹಶೀಲ್ದಾರ್ ಬೆಂಗಳೂರು ಉತ್ತರ ತಾಲ್ಲೂಕು, ಮುಖ್ಯಾಧಿಕಾರಿ, ಪುರಸಭೆ ಚಿಕ್ಕಬಾಣಾವರ, ಮುಖ್ಯ ಕಾರ್ಯನಿರ್ವಾಹಕ, ಬೆಂಗಳೂರು ನಗರ ಜಿಲ್ಲೆರವರುಗಳನ್ನು ಎದುರುದಾರನ್ನಾಗಿಸಿ ಪ್ರಕರಣವನ್ನು ದಾಖಲು ಮಾಡಿರುತ್ತಾರೆ. ಸದರಿ ಪ್ರಕರಣವು ವಿಚಾರಣೆಯ ಹಂತದಲ್ಲಿರುತ್ತದೆ. |
| ಆ. | ಅಪರಾಧ ಹಿನ್ನಲೆಯ ಉದ್ದೇಶಪೂರ್ವಕ ದೂರುದಾರ ವ್ಯಕ್ತಿಯೊಬ್ಬರು ನೀಡಿದ ಆಧಾರರಹಿತ ದೂರಿನ ಮೇಲೆ ಗ್ರಾಮದ 1 ರಿಂದ 100 ರವರೆಗಿನ ಎಷ್ಟು ಆಸ್ತಿ ಮಾಲೀಕರಿಗೆ ಪುರಸಭೆಯಿಂದ ನೋಟಿಸ್ ನೀಡಲಾಗಿದೆ: ಅದರಲ್ಲಿ ಎಷ್ಟು ಹಾಜರಪಡಿಸಿದರು (ವಿವರ ನೀಡುವುದು) | 59 ಮಾಲೀಕರುಗಳಿಗೆ ನೋಟಿಸ್‌ಗಳನ್ನು ನೀಡಲಾಗಿರುತ್ತದೆ. ಆಸ್ತಿ ಹಕ್ಕನ್ನು ಪ್ರತಿಪಾದಿಸುವ ದಾಖಲೆಗಳನ್ನು ಪುರಸಭೆ ಚಿಕ್ಕಬಾಣಾವರ ಇವರಿಗೆ ಸಲ್ಲಿಸಿರುವುದಿಲ್ಲ **(ಅನುಬಂಧ-2 ನೀಡಲಾಗಿದೆ).** |
| ಇ. | ಆಧಾರ ರಹಿತ ದೂರಿಗೆ ಇಷ್ಟು ಪ್ರಾಮುಖ್ಯತೆ ನೀಡಲು ಕಾರಣಗಳೇನು: | ದೂರುದಾರರ ದೂರನ್ನು ಆಧಾರವಾಗಿಟ್ಟುಕೊಂಡು ಆಸ್ತಿ ವಹಿಯಲ್ಲಿ ಯಾವುದೇ ಆಸ್ತಿಗಳ ಮುಂದೆ ತಕರಾರು ಎಂದು ನಮೂದಿಸಿರುವುದಿಲ್ಲ. |
| ಈ. | ಇವರ ದೂರನ್ನು ಆಧಾರವಾಗಿಟ್ಟು ಕೊಂಡು ರಿಜಿಸ್ಟರ್ ನಲ್ಲಿ ಎಷ್ಟು ಆಸ್ತಿಗಳ ಮುಂದೆ | |

| | | |
|---|---|---|
| | ತಕರಾರು ಎಂದು ದಾಖಲಿಸಲಾಗಿದೆ; ಈ ರೀತಿಯಲ್ಲಿ ಆಧಾರರಹಿತ ದೂರಿಗೆ ತಕರಾರು ಎಂದು ದಾಖಲಿಸುವುದು ಸಮಂಜಸವೇ? | |
| ಉ. | ಇವರ ದೂರಿನ ಕಾರಣದಿಂದ ಗ್ರಾಮಠಾಣಾ ವ್ಯಾಪ್ತಿಯ ಆಸ್ತಿಗಳ ತೆರಿಗೆಯನ್ನು ಸಹ ಪುರಸಭೆಯ ಅಧಿಕಾರಿಗಳು ಸ್ವೀಕರಿಸದೇ ಹಿಂಬರಹ ನೀಡಿ, ಕಂದಾಯ ನಿವೇಶನಗಳ ತೆರಿಗೆ ಸ್ವೀಕರಿಸುವ ಮೂಲಕ ಪುರಸಭೆಗೆ ನಷ್ಟವುಂಟು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು: | ಇಲ್ಲಾ. |
| ಊ. | ಗ್ರಾಮಠಾಣ ವ್ಯಾಪ್ತಿಯಲ್ಲಿನ ಸ್ವತ್ತು ನಮೂನೆ-9 ಮತ್ತು ಮ್ಯುಟೇಷನ್ ರಿಜಿಸ್ಟರ್‌ನಲ್ಲಿ ದಾಖಲಾಗಿದ್ದು, ಗ್ರಾಮಠಾಣ ಸ್ಕೆಚ್ ಸಲ್ಲಿಸಿದ್ದರೂ ಸಹ ಇ-ಆಸ್ತಿ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; | ಈ ಕುರಿತು ಜಿಲ್ಲಾಧಿಕಾರಿಗಳು ಬೆಂಗಳೂರು ನಗರ ಇವರಿಂದ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. |
| ಋ. | ಗ್ರಾಮಠಾಣ ವ್ಯಾಪ್ತಿಯಲ್ಲಿನ ಸ್ವತ್ತುಗಳ ಸಂಖ್ಯೆ ಎಷ್ಟು ಮತ್ತು ಅವುಗಳಿಂದ 2021ರಿಂದ ಇಲ್ಲಿಯವರೆಗೆ ವಸೂಲಿ ಮಾಡಿದ ತೆರಿಗೆ ಎಷ್ಟು, ಬಾಕಿಯಿರುವ ತೆರಿಗೆ ಎಷ್ಟು: (ವರ್ಷಾವಾರು ವಿವರ ನೀಡುವುದು) ಬಾಕಿ ವಸೂಲಿಗೆ ಡಿಮ್ಯಾಂಡ್ ನೋಟೀಸ್ ನೀಡಲಾಗಿದೆಯೇ: ನೀಡಲಾಗಿದ್ದರೆ ಎಷ್ಟು ಬಾರಿ ನೋಟೀಸ್ ನೀಡಲಾಗಿದೆ: | ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯ ಸೋಮಶೆಟ್ಟಿಹಳ್ಳಿ ಗ್ರಾಮಠಾಣಾ ವ್ಯಾಪ್ತಿಯಲ್ಲಿನ ಸ್ವತ್ತುಗಳ ಸಂಖ್ಯೆ:125 ಈ ಸ್ವತ್ತುಗಳ ಮಾಲೀಕರಿಂದ ತೆರಿಗೆ ಪಾವತಿ ಮಾಡಿಕೊಂಡಿರುವುದಿಲ್ಲ. 2021-22ನೇ ಸಾಲಿನಿಂದ ಸದರಿ ಪ್ರದೇಶವು ಶಿವರಾಮಕಾರಂತ ಬಡಾವಣೆಯ ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿರುವ ಪ್ರದೇಶಕ್ಕೆ ಒಳಪಟ್ಟಿರುವ ಹಿನ್ನಲೆಯಲ್ಲಿ ಸೋಮಶೆಟ್ಟಿಹಳ್ಳಿ ಗ್ರಾಮಠಾಣಾ ವ್ಯಾಪ್ತಿಯಲ್ಲಿರುವ ಆಸ್ತಿಗಳಿಗೆ ತೆರಿಗೆ ಪಾವತಿಸಿಕೊಳ್ಳಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅನುಮತಿ ಪಡೆಯುವ ಹಂತದಲ್ಲಿರುತ್ತದೆ. |
| ಎ. | ಸೋಮಶೆಟ್ಟಿಹಳ್ಳಿ ಗ್ರಾಮದ ಗ್ರಾಮಠಾಣ ವ್ಯಾಪ್ತಿಯ ನಮೂನೆ-9 ರಲ್ಲಿ ದಾಖಲಾಗಿರುವ ಎಲ್ಲಾ ಆಸ್ತಿಗಳಿಗೂ ಇ-ಆಸ್ತಿ ನೀಡಲು ಸರ್ಕಾರ ಕೈಗೊಳ್ಳುವ ಕ್ರಮವೇನು? | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಯಾವುದೇ ಗ್ರಾಮಠಾಣಾ ವ್ಯಾಪ್ತಿಯ ಆಸ್ತಿಗಳಿಗೆ ಇ-ಆಸ್ತಿ ತಂತ್ರಾಂಶದಡಿ ನಮೂನೆ-3ನ್ನು ನೀಡಿ ಮುನಿಸಿಪಲ್ ಆಸ್ತಿ ತೆರಿಗೆದಾರರನ್ನಾಗಿಸಲು ಯಾವುದೇ ನಿರ್ಬಂಧವಿರುವುದಿಲ್ಲ.<br><br>ಪತ್ರ ಸಂಖ್ಯೆ:ಬೆಂ.ಅ.ಪ್ರಾ.ಕಾ/ಅ/ಶಿವರಾಮಕಾರಂತ/1130-2020-21, ದಿನಾಂಕ: 12.02.2021ರಲ್ಲಿ ಉದೇಶಿತ ಶಿವರಾಮಕಾರಂತ ಬಡಾವಣೆಗೆ ಅಧಿಸೂಚನೆ ಹೊರಡಿಸಿದ್ದು, ಉದ್ದೇಶಿತ ಬಡಾವಣೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುವ ಹಿನ್ನಲೆಯಲ್ಲಿ ಸ್ವಾಧೀನಪಡಿಸಿಕೊಳ್ಳಲು ಅಧಿಸೂಚನೆ ಹೊರಡಿಸಿರುವ ಸೋಮಶೆಟ್ಟಿಹಳ್ಳಿ ಗ್ರಾಮದ ಸರ್ವೆ ಸಂಖ್ಯೆಗಳ ಆಸ್ತಿಗಳು ಮತ್ತು ಗ್ರಾಮಠಾಣಾ ವ್ಯಾಪ್ತಿಯ ಆಸ್ತಿಗಳನ್ನೊಳಗೊಂಡಂತೆ ಚಿಕ್ಕಬಾಣಾವಾರ ಪುರಸಭೆ ವತಿಯಿಂದ ಆಸ್ತಿ ತೆರಿಗೆ ಪಾವತಿ ಮತ್ತು ಇ-ಆಸ್ತಿ ನೀಡಬಾರದೆಂದು ಸೂಚಿಸಿರುವ ಹಿನ್ನಲೆಯಲ್ಲಿ ಇ-ಆಸ್ತಿ ನಮೂನೆ-3ನ್ನು ನೀಡುತ್ತಿರುವುದಿಲ್ಲ. |

ಸಂಖ್ಯೆ: ನಅಇ 245 ಜಿಇಎಲ್ 2024 (ಇ)

(ರಹೀಂಖಾನ್)
ಪೌರಾಡಳಿತ ಮತ್ತು ಹಜ್ ಸಚಿವರು

ಅನುಬಂಧ -01 (49)

ಕರ್ನಾಟಕ ಭೂ ಕಬಳಿಕೆ ನಿಷೇಧ ಕಾಯಿದೆಯ 2011 ರ ಸೆಕ್ಷನ್ 9ರ ಉಪ-ಸೆಕ್ಷನ್
(1) ರ ಅಡಿಯಲ್ಲಿ ಸಲ್ಲಿಸುವ ಅರ್ಜಿ
(ರೆಗ್ಯುಲೇಶನ್ 27 (1) ನೋಡಿ)
ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ.
3ನೇ ಮಹಡಿ, ಕಂದಾಯ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು. ಅನುಬಂಧ-1
ಎಲ್.ಜಿ.ಸಿ. (      ) ನಂ      /

ದೂರುದಾರರು/ಅರ್ಜಿದಾರರು : 1. ರಂಗಪ್ಪ. ಸಿ ಬಿನ್ ಲೇ॥ ಚಿಕ್ಕಣ್ಣ
ಆಂಜನೇಯ ದೇವಾಲಯದ ಹತ್ತಿರ,
ಸೋಮಶೆಟ್ಟಿಹಳ್ಳಿ, ಚಿಕ್ಕಬಾಣಾವರ (ಅಂಚೆ),
ಬೆಂಗಳೂರು-560090.

2. ಅಶೋಕ.ಎಂ ಬಿನ್ ಮಾಸ್ತಪ್ಪ
#23, ಯಶಸ್ ವಿದ್ಯಾಲಯದ ಹತ್ತಿರ,
ಸೋಮಶೆಟ್ಟಿಹಳ್ಳಿ, ಚಿಕ್ಕಬಾಣಾವರ (ಅಂಚೆ),
ಬೆಂಗಳೂರು-560090.

3. ಲೋಕೇಶ್.ಎನ್ ಬಿನ್ ನಂಜಪ್ಪ
#23, ಯಶಸ್ ವಿದ್ಯಾಲಯದ ಹತ್ತಿರ,
ಸೋಮಶೆಟ್ಟಿಹಳ್ಳಿ, ಚಿಕ್ಕಬಾಣಾವರ (ಅಂಚೆ),
ಬೆಂಗಳೂರು-560090.

ವಿರುದ್ಧ

ಎದುರುದಾರರು : 1. ಲಕ್ಷ್ಮೀ ಜನಾರ್ಧನ ಬಿನ್ ಲೇ॥ ಮುನಿಯಪ್ಪ,
ಸೋಮಶೆಟ್ಟಿಹಳ್ಳಿ, ಚಿಕ್ಕಬಾಣಾವರ (ಅಂಚೆ),
ಬೆಂಗಳೂರು-560090.

2. ಲಾವಣ್ಯ ಕೋಂ ಲಕ್ಷ್ಮೀ ಜನಾರ್ಧನ,
ಸೋಮಶೆಟ್ಟಿಹಳ್ಳಿ, ಚಿಕ್ಕಬಾಣಾವರ (ಅಂಚೆ),
ಬೆಂಗಳೂರು-560090.

[illegible]ಧಿಕಾರಿ
[illegible]
[illegible]

2. ತಹಶೀಲ್ದಾರ್,
ಕಂದಾಯ ಭವನ, ಬೆಂಗಳೂರು ಉತ್ತರ ತಾ||.
ಬೆಂಗಳೂರು ನಗರ ಜಿಲ್ಲೆ-560009

3. ಮುಖ್ಯಾಧಿಕಾರಿಗಳು,
ಚಿಕ್ಕಬಾಣಾವರ ಪುರಸಭೆ,
ಬೆಂಗಳೂರು ಉತ್ತರ ತಾಲ್ಲೂಕು,
ಬೆಂಗಳೂರು ನಗರ ಜಿಲ್ಲೆ-560090

4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಬೆಂಗಳೂರು ನಗರ ಜಿಲ್ಲೆ,
ಬನಶಂಕರಿ, ಬೆಂಗಳೂರು ದಕ್ಷಿಣ ತಾ||.
ಬೆಂಗಳೂರು ನಗರ ಜಿಲ್ಲೆ-560050

1. ಪ್ರಕರಣದ ಪೂರ್ಣ ವಿವರ : ಸೋಮಶೆಟ್ಟಿಹಳ್ಳಿ ಗ್ರಾಮದ ಖಾತ ನಂ 42/43 (ಇ-ಖಾತ ಸಂಖ್ಯೆ 150200203400400047) ಪಡೆದುಕೊಳ್ಳಿ. ಸದರಿ ಸರ್ಕಾರಿ ಜಾಗವನ್ನು ಸುಳ್ಳು ದಾಖಲೆ ಸೃಷ್ಟಿಸಿ ಭೂ ಕಬಳಿಕೆ ಮಾಡಿದವರ ಮೇಲೆ ಹಾಗೂ ಇದಕ್ಕೆ ಸಹಕರಿಸಿದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸೋಮಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂ 25 ರ ಸರ್ಕಾರಿ ಜಮೀನಿನಲ್ಲಿ ಲಕ್ಷ್ಮೀಜನಾರ್ಧನ ಇವರು ಮನೆ ನಿರ್ಮಿಸಿದ್ದಾರೆ. ಸದರಿ ಮನೆಯನ್ನು ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದ ಇವರ ಪತ್ನಿ ಶ್ರೀಮತಿ ಜಯಮ್ಮ ಅವರು ತಮ್ಮ ಸದಸ್ಯ ಸ್ಥಾನವನ್ನು ದುರುಪಯೋಗ ಪಡಿಸಿಕೊಂಡು ಗ್ರಾಮಠಾಣಾ ಸ್ವತ್ತು ಎಂದು ಸುಳ್ಳು ದಾಖಲೆ ಸೃಷ್ಟಿಸಿ ಸರ್ವೆ ನಂ 25 ರ ಗೋಮಾಳ ಜಮೀನಿಗೆ ಇ-ಖಾತಾ ಮಾಡಿಸಿರುತ್ತಾರೆ. ಸದರಿ ಇ-ಖಾತ ಸಂಖ್ಯೆ 150200203400400047 ಆಗಿರುತ್ತದೆ. ಸರ್ವೆ ನಂ 25 ರ ಸರ್ಕಾರಿ ಆಸ್ತಿಯನ್ನು ಗ್ರಾಮಠಾಣಾ ಸ್ವತ್ತು ಎಂದು ಸುಳ್ಳು ಮಾಹಿತಿ ನೀಡಿ ತಮ್ಮ ಪತಿಯ ಹೆಸರಿಗೆ ಇ-ಖಾತಾ ಮಾಡಿಸಿರುತ್ತಾರೆ. ಸದರಿ ಸ್ವತ್ತನ್ನು ದಾನಪತ್ರದಲ್ಲಿ ಪಿತ್ರಾರ್ಜಿತ ಎಂಬುದಾಗಿ ತೋರಿಸಿದ್ದು, ಸರ್ಕಾರಿ ಆಸ್ತಿ ಇವರಿಗೆ ಪಿತ್ರಾರ್ಜಿತವಾಗಿ ಬಂದ ದಾಖಲೆಗಳನ್ನು ಪರಿಶೀಲಿಸಬೇಕು.

ದಿ|| ಜಯಮ್ಮನವರು ಲಕ್ಷ್ಮೀಜನಾರ್ಧನ ಇವರಿಗೆ ಮಾಡಿಕೊಟ್ಟ ದಾನಪತ್ರದಲ್ಲಿ ಸದರಿ ಮೂಲದಾಖಲಾ ಸಂಖ್ಯೆ 12/2/2013 ಎಂದು ತೋರಿಸಿದ್ದು, ಸರ್ವೇ ನಂ 25 ರ ಸರ್ಕಾರಿ ಸ್ವತ್ತನ್ನು ಗ್ರಾಮಠಾಣಾ ಎಂದು ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡಿರುತ್ತಾರೆ. ಸದರಿ ಆಸ್ತಿಗೆ ಸಂಬಂಧವೇ ಇಲ್ಲದವರ ಮೇಲೆ ದಾವೆಯನ್ನು ಸಲ್ಲಿಸಿ ರಾಜಿ ಮಾಡಿಕೊಂಡಂತೆ ಪತ್ರ ಸೃಷ್ಟಿಸಿ ಸರ್ಕಾರಿ ಸ್ವತ್ತನ್ನು ಕಬಳಿಸಿರುತ್ತಾರೆ.

ನ್ಯಾಯಾಲಯದ ಆದೇಶ ಮತ್ತು ದಾಖಲೆಗಳಲ್ಲಿ ಗ್ರಾಮಠಾಣಾ ಆಸ್ತಿ ಸಂಖ್ಯೆ 42/41 ಎಂದು ನ್ಯಾಯಾಲಯಕ್ಕೆ ಮತ್ತು ಇತರ ಸರ್ಕಾರಿ ಇಲಾಖೆಗಳಿಗೆ, ಹಾಗೂ ನ್ಯಾಯಾಲಯಕ್ಕೆ ಸುಳ್ಳು ಮಾಹಿತಿಯನ್ನು ನೀಡಿರುತ್ತಾರೆ. ಆದರೆ ಇದು ವಾಸ್ತವವಾಗಿ ಸರ್ವೆ ನಂ. 18 ರ ಸರ್ಕಾರಿ ಜಮೀನು ಆಗಿರುತ್ತದೆ, ಗ್ರಾಮಠಾಣಾ ವ್ಯಾಪ್ತಿಯಲ್ಲಿ ಬರುವುದಿಲ್ಲ.

ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯತಿಯ ಅಧಿಕಾರಿಗಳು ಸರ್ಕಾರಿ ಆಸ್ತಿಯನ್ನು ಕಬಳಿಸಲು ಇವರಿಗೆ ಸಹಕರಿಸಿ, ಇ-ಸ್ವತ್ತು ಮಾಡಿಕೊಟ್ಟಿರುತ್ತಾರೆ. ಇವರಿಗೆ 193.98 ಚದರ ಮೀಟರ್ (2087.9 ಚದರ ಅಡಿ) ಜಾಗಕ್ಕೆ ಇ-ಖಾತೆಯನ್ನು ಗ್ರಾಮ ಪಂಚಾಯತಿ ವತಿಯಿಂದ ನಿಯಮಬಾಹಿರವಾಗಿ ಮಾಡಿಕೊಡಲಾಗಿರುತ್ತದೆ.

ಪ್ರಸ್ತುತ ಸದರಿ ಸ್ವತ್ತು ಚಿಕ್ಕಬಾಣಾವರ ಪುರಸಭೆಯ ವ್ಯಾಪ್ತಿಯಲ್ಲಿ ಬರುತ್ತಿದ್ದು ಸದರಿ ಇ-ಖಾತೆಯನ್ನು ವಜಾ ಮಾಡುವಂತೆ ಮನವಿಯನ್ನು ಮಾಡಿದ್ದರೂ ಇಲ್ಲಿಯವರೆಗೂ ಇ-ಖಾತೆಯನ್ನು ವಜಾ ಮಾಡಿರುವುದಿಲ್ಲ. ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಬೆಂಗಳೂರು ಉತ್ತರ ತಹಶೀಲ್ದಾರರಿಗೆ ದೂರು ನೀಡಿದ್ದು, ಅವರು ಸಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

| | |
|---|---|
| 2. (ಅ) ಭೂಮಿಯ ಮೌಲ್ಯ | : ಸುಮಾರು 80 ಲಕ್ಷ ರೂಪಾಯಿಗಳು |
| (ಆ) ಸದರಿ ಭೂಮಿಯ ಮೇಲೆ ಮನೆ ಅಥವಾ ಇತರ ಕಟ್ಟಡಗಳು ಇವೆಯೇ ? ಅವು ಯಾರಿಗೆ ಸಂಬಂಧಿಸಿವೆ, ಅವುಗಳನ್ನು ಹೇಗೆ ಪಡೆದುಕೊಂಡಿದ್ದಾರೆ ಮತ್ತು ಆ ಜಮೀನಿನ ಒಟ್ಟು ಮಾರುಕಟ್ಟೆ ಬೆಲೆ. | : ಮನೆಗಳನ್ನು ನಿರ್ಮಾಣ ಮಾಡಲಾಗಿದೆ ಸದರಿ ಕಟ್ಟಡಗಳು ಲಕ್ಷ್ಮೀಜನಾರ್ಧನ ಇವರಿಗೆ ಸೇರಿದೆ ಸುಳ್ಳು ದಾಖಲೆಗಳನ್ನು ಸೃಷ್ಟಿಸುವ ಮೂಲಕ ಪಡೆದುಕೊಂಡಿದ್ದಾರೆ<br>ಜಮೀನಿನ ಒಟ್ಟು ಮಾರುಕಟ್ಟೆ ಬೆಲೆ ಅಂದಾಜು 80 ಲಕ್ಷ ರೂ |
| 3. ವ್ಯಾಜ್ಯದ ಕಾರಣ | : ಸರ್ಕಾರಿ ಜಾಗವನ್ನು ಗ್ರಾಮಠಾಣಾ ಜಾಗವೆಂದು ಸುಳ್ಳು ದಾಖಲೆ ಸೃಷ್ಟಿಸಿ ಭೂ ಕಬಳಿಕೆ ಮಾಡಿರುವುದು. |



ಮುಖ್ಯಾಧಿಕಾರಿ
ಪುರಸಭೆ
ಚಿಕ್ಕಬಾಣಾವರ

ಅಧಿಕಾರ ವ್ಯಾಪ್ತಿ : ಬೆಂಗಳೂರು ಉತ್ತರ ತಾಲ್ಲೂಕು.

5. ನ್ಯಾಯಾಲಯದ ಹಕ್ಕು :

6. ಪ್ರಾರ್ಥನೆ : ಸುಳ್ಳು ದಾಖಲೆ ಸೃಷ್ಟಿಸಿದವರ ಮೇ. ಮತ್ತು ಅದಕ್ಕೆ ಸಹಕರಿಸಿದವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಂಡು, ಸರ್ಕಾ. ಆಸ್ತಿ ವಶಪಡಿಸಿಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ.

## ಷೆಡ್ಯೂಲಿನ ವಿವರ

1. ಸರ್ವೆ ನಂ/ ವಾರ್ಡ್ ನಂ/ಗ್ರಾಮದ ಹೆಸರು/ ಪಟ್ಟಣ ಪಂಚಾಯತ್/ಸಿ.ಎಂ.ಸಿ/ಕಾರ್ಪೋರೇಷನ್ : ಸರ್ವೆ ನಂ 25, ಚಿಕ್ಕಬಾಣಾವರ ಪುರಸಭೆ.
2. ತಾಲ್ಲೂಕಿನ ಹೆಸರು : ಬೆಂಗಳೂರು ಉತ್ತರ ತಾಲ್ಲೂಕು.
3. ಜಿಲ್ಲೆಯ ಹೆಸರು : ಬೆಂಗಳೂರು ನಗರ ಜಿಲ್ಲೆ
4. ಭೂಮಿಯ ವರ್ಗೀಕರಣ (ಈ ಕಾಯ್ದೆಯ ಕಲಂ 2ರ ರಲ್ಲಿ ವ್ಯಾಖ್ಯಾನಿಸಿದಂತೆ : ಸರ್ಕಾರಿ ಗೋಮಾಳ
5. ಸರ್ವೆ ನಂ ಮತ್ತು ಸಬ್ ಡಿವಿಜನ್ : ಸರ್ವೆ ನಂ 25 . ಬೆಂಗಳೂರು ಉತ್ತರ ಉಪ ವಿಭಾಗ
6. ವಿಸ್ತೀರ್ಣ : 30[illegible] ಚದರ ಅಡಿ

7. ಸ್ವತ್ತಿನ ಚಕ್ಕುಬಂದಿ ಅಥವಾ ಸದರಿ ಜಮೀನಿನ ಅಕ್ಕಪಕ್ಕದ ಜಮೀನುಗಳು

ಅ. ಪೂರ್ವ : ಸರ್ವೆ ನಂ 25 ರ ಖಾಲಿ ಜಾಗ
ಆ. ಪಶ್ಚಿಮ : ಲಿಂಗಪ್ಪನವರ ಮನೆ
ಇ. ಉತ್ತರ : ಗೋಪಾಲಪ್ಪನವರ ಮನೆ
ಈ. ದಕ್ಷಿಣ : ಸರ್ಕಾರಿ ರಸ್ತೆ

ಅರ್ಜಿದಾರರ ಪರ ವಕೀಲರು

ಅರ್ಜಿದಾರರು/ದೂರುದಾರರು

ಮುಖ್ಯಾಧಿಕಾರಿ
ಪುರಸಭೆ
ಚಿಕ್ಕಬಾಣಾವರ

## ಪರಿಶೀಲನೆ

ಅರ್ಜಿದಾರರಾದ ನಾವು ರಂಗಪ್ಪ.ಬಿ, ಅಶೋಕ.ಎಂ ಮತ್ತು ಲೋಕೇಶ್.ಎಸ್ ಮೇಲೆ ಹೇಳಿದ ಎಲ್ಲಾ ಅಂಶಗಳು ನಮ್ಮ ತಿಳುವಳಿಕೆಯ ಪ್ರಕಾರ ಸತ್ಯಾಂಶದಿಂದ ಕೂಡಿದ್ದು, ಸರಿಯಾಗಿರುತ್ತದೆಂದು ಈ ಮೂಲಕ ಪ್ರಮಾಣೀಕರಿಸುತ್ತೇವೆ.

ಅರ್ಜಿದಾರರು/ದೂರುದಾರರು

ಬಿ. ರಂಗಪ್ಪ

(ಅಶೋಕ.ಎಂ

N. Lokesh. (ಲೋಕೇಶ.ಎಸ್)

ಸ್ಥಳ : ಬೆಂಗಳೂರು

ದಿನಾಂಕ : 16/01/2024

ಸರ್ಕಾರಿ ಅಭಿಯೋಜಕರು

ಮುಖ್ಯಾಧಿಕಾರಿ,
ಪುರಸಭೆ
ಚಿಕ್ಕಬಾಣಾವರ

# ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ

3ನೇ ಮಹಡಿ, ಕಂದಾಯ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು

ನ್ಯಾಯಾಂಗಣ-01

ಎಲ್.ಜಿ.ಸಿ (ಪಿ) ನಂ. 60_2024

ದೂರುದಾರರು : ರಂಗಪ್ಪ ಸಿ. ಬಿನ್ ಲೇಟ್ ಚಿಕ್ಕಣ್ಣ ಮತ್ತು ಇತರರು

-ವಿರುದ್ಧ-

ಎದುರುದಾರರು: ಲಕ್ಷ್ಮೀ ಜನಾರ್ಧನಾ ಬಿನ್ ಲೇಟ್ ಮುನಿಯಪ್ಪ ಮತ್ತು ಇತರರು

R. Sec, JE 28/11/24 28/11/24

ಗೆ,
ಮುಖ್ಯ ಅಧಿಕಾರಿ,
ಚಿಕ್ಕಬಾಣಾವರ ಪುರಸಭೆ,
ಬೆಂಗಳೂರು ಉತ್ತರ ತಾಲ್ಲೂಕು,
ಬೆಂಗಳೂರು.

ಪುರಸಭಾ ಕಾರ್ಯಾಲಯ, ಚಿಕ್ಕಬಾಣಾವರ, ಬೆಂ.ಉ.ತಾ. ನಂ. 1059 ದಿ. 27/11/2024

ವಿಷಯ : ನ್ಯಾಯಾಲಯದ ಆದೇಶದ ಪ್ರಕಾರ ದೂರು ಅಪಾದನೆಗೆ ಸಂಬಂಧಿಸಿದಂತೆ ವಿವರವಾದ ವರದಿಯನ್ನು ಒತ್ತುವರಿದಾರರ ಹೆಸರು, ಒತ್ತುವರಿ ವಿಸ್ತೀರ್ಣ ಮತ್ತು ಸರ್ವೆ ನಕಾಶೆಯ ಜೊತೆಗೆ ಸಲ್ಲಿಸುವ ಕುರಿತು.

****

ಬೆಂಗಳೂರು ನಗರ, ಬೆಂಗಳೂರು ಉತ್ತರ ತಾಲ್ಲೂಕು, ಸೋಮಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂ. 25 ರಲ್ಲಿನ ಸರ್ಕಾರಿ ಗೋಮಾಳ ಜಮೀನಾಗಿದ್ದು, ಎದುರುದಾರ ನಂ. 2ರವರು ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದು, ಅವರ ಅಧಿಕಾರ ದುರುಪಯೋಗ ಪಡಿಸಿಕೊಂಡು ಗ್ರಾಮಠಾಣಾ ಸ್ವತ್ತು ಎಂದು ಸುಳ್ಳು ದಾಖಲೆ ಸೃಷ್ಟಿಮಾಡಿ 2087.9 ಚದರ ಅಡಿ ಜಾಗವನ್ನು ಒತ್ತುವರಿ ಮಾಡಿರುತ್ತಾರೆ ಎಂದು ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ದೂರು ದಾಖಲು ಮಾಡಿಕೊಂಡು ವಿಚಾರಣೆಗೆ ಮುಂದಿಸಲಾಗಿದ್ದು. ನ್ಯಾಯಾಲಯದ ಆದೇಶದ ಪ್ರಕಾರ ದೂರಿನ ಆಪಾದನೆಗೆ ಸಂಬಂಧಿಸಿದಂತೆ ವರದಿಯನ್ನು ಒತ್ತುವರಿದಾರರ ಹೆಸರು ಮತ್ತು ಒತ್ತುವರಿ ವಿಸ್ತೀರ್ಣವನ್ನು ಮತ್ತು ಸರ್ವೆ ನಕಾಶೆಯ ಜೊತೆ ಸಂಬಂಧಿಸಿದ ದಾಖಲೆಗಳ ಜೊತೆಗೆ ತಪ್ಪದೇ ದಿನಾಂಕ 17.12.2024ರ ಮುಂಜಾನೆ 11.00 ಗಂಟೆಗೆ ಸಲ್ಲಿಸಬೇಕೆಂದು ನ್ಯಾಯಾಧೀಶರ ಆದೇಶಿಸಿರುವಂತೆ ಈ ಮೂಲಕ ನಿಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ಇದರೊಂದಿಗೆ ದೂರು ಅರ್ಜಿಯ ಪ್ರತಿಯನ್ನು ಲಗತ್ತಿಸಲಾಗಿದೆ.

ದಿನಾಂಕ 14ನೇ ನವೆಂಬರ್ 2024ರಂದು ನೀಡಲಾಗಿದೆ.

ನ್ಯಾಯಾಧೀಶರ ಆದೇಶದ ಮೇರೆಗೆ

ರಿಜಿಸ್ಟ್ರಾರ್
ಕ. ಭೂ. ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ,
ಬೆಂಗಳೂರು.
14/11

PG

ಮುಖ್ಯಾಧಿಕಾರಿ
ಪುರಸಭೆ

N. LOKESH
9901306179. 9902787661

ಕರ್ನಾಟಕ ಭೂ ಕಬಳಿಕೆ ನಿಷೇದ ಕಾಯಿದೆಯ 2011 ರ ಸೆಕ್ಷನ್ 9ರ ಉಪ-ಸೆಕ್ಷನ್
(1) ರ ಅಡಿಯಲ್ಲಿ ಸಲ್ಲಿಸುವ ಅರ್ಜಿ
(ರೆಗ್ಯೂಲೇಶನ್ 27 (1) ನೋಡಿ)
ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ,
3ನೇ ಮಹಡಿ, ಕಂದಾಯ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು.
ಎಲ್.ಜಿ.ಸಿ. ( ಪಿ ) ನಂ 60/2024

ದೂರುದಾರರು/ಅರ್ಜಿದಾರರು : 1. ರಂಗಪ್ಪ. ಸಿ ಬಿನ್ ಲೇ॥ ಚಿಕ್ಕಣ್ಣ
ಆಂಜನೇಯ ದೇವಾಲಯದ ಹತ್ತಿರ,
ಸೋಮಶೆಟ್ಟಿಹಳ್ಳಿ, ಚಿಕ್ಕಬಾಣಾವರ (ಅಂಚೆ),
ಬೆಂಗಳೂರು-560090.

2. ಅಶೋಕ.ಎಂ ಬಿನ್ ಮಾಸ್ತಪ್ಪ,
#23, ಯಶಸ್ ವಿದ್ಯಾಲಯದ ಹತ್ತಿರ,
ಸೋಮಶೆಟ್ಟಿಹಳ್ಳಿ, ಚಿಕ್ಕಬಾಣಾವರ (ಅಂಚೆ),
ಬೆಂಗಳೂರು-560090.

3. ಲೋಕೇಶ್.ಎನ್ ಬಿನ್ ನಂಜಪ್ಪ
#23, ಯಶಸ್ ವಿದ್ಯಾಲಯದ ಹತ್ತಿರ,
ಸೋಮಶೆಟ್ಟಿಹಳ್ಳಿ, ಚಿಕ್ಕಬಾಣಾವರ (ಅಂಚೆ),
ಬೆಂಗಳೂರು-560090.

24/1/24

ವಿರುದ್ಧ

ಎದುರುದಾರರು : 1. ಲಕ್ಷ್ಮೀ ಜನಾರ್ಧನ ಬಿನ್ ಲೇ॥ ಮುನಿಯಪ್ಪ,
ಸೋಮಶೆಟ್ಟಿಹಳ್ಳಿ, ಚಿಕ್ಕಬಾಣಾವರ (ಅಂಚೆ),
ಬೆಂಗಳೂರು-560090.

2. ಲಾವಣ್ಯ ಕೋಂ ಲಕ್ಷ್ಮೀ ಜನಾರ್ಧನ,
ಸೋಮಶೆಟ್ಟಿಹಳ್ಳಿ, ಚಿಕ್ಕಬಾಣಾವರ (ಅಂಚೆ),
ಬೆಂಗಳೂರು-560090.



From No. : 1136/2024
Registrar
KLGPSC, Bengaluru.

Received By hand
TIME 3:40 P.M
Date 24-01-2024

ಮುಖ್ಯಾಧಿಕಾರಿ
ಪುರಸಭೆ
ಚಿಕ್ಕಬಾಣಾವರ

೨. ತಹಶೀಲ್ದಾರರು,
ಕಂದಾಯ ಭವನ, ಬೆಂಗಳೂರು ಉತ್ತರ ತಾ॥,
ಬೆಂಗಳೂರು ನಗರ ಜಿಲ್ಲೆ-560009

೩. ಮುಖ್ಯಾಧಿಕಾರಿಗಳು,
ಚಿಕ್ಕಬಾಣಾವರ ಪುರಸಭೆ,
ಬೆಂಗಳೂರು ಉತ್ತರ ತಾಲ್ಲೂಕು,
ಬೆಂಗಳೂರು ನಗರ ಜಿಲ್ಲೆ-560090

೪. ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು,
ಬೆಂಗಳೂರು ನಗರ ಜಿಲ್ಲೆ,
ಬನಶಂಕರಿ, ಬೆಂಗಳೂರು ದಕ್ಷಿಣ ತಾ॥,
ಬೆಂಗಳೂರು ನಗರ ಜಿಲ್ಲೆ-560050

1. ಪ್ರಕರಣದ ಪೂರ್ಣ ವಿವರ : ಸೋಮಶೆಟ್ಟಿಹಳ್ಳಿ ಗ್ರಾಮದ ಖಾತ ನಂ 42/43 (ಇ-ಖಾತ ಸಂಖ್ಯೆ 150200203400400047) ವಜಾಗೊಳಿಸಿ, ಸದರಿ ಸರ್ಕಾರಿ ಜಾಗವನ್ನು ಸುಳ್ಳು ದಾಖಲೆ ಸೃಷ್ಟಿಸಿ ಭೂ ಕಬಳಿಕೆ ಮಾಡಿದವರ ಮೇಲೆ ಹಾಗೂ ಇದಕ್ಕೆ ಸಹಕರಿಸಿದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸೋಮಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂ 25 ರ ಸರ್ಕಾರಿ ಜಮೀನಿನಲ್ಲಿ ಲಕ್ಷ್ಮೀಜನಾರ್ಧನ ಇವರು ಮನೆ ನಿರ್ಮಿಸಿದ್ದರು. ಸದರಿ ಮನೆಯನ್ನು ಗ್ರಾಮ ಪಂಚಾಯತ್ ಸದಸ್ಯರಾಗಿದ್ದ ಇವರ ಪತ್ನಿ ಶ್ರೀಮತಿ ಲಾವಣ್ಯ ಅವರು ತಮ್ಮ ಸದಸ್ಯ ಸ್ಥಾನವನ್ನು ದುರುಪಯೋಗ ಪಡಿಸಿಕೊಂಡು ಗ್ರಾಮಠಾಣಾ ಸ್ವತ್ತು ಎಂದು ಸುಳ್ಳು ದಾಖಲೆ ಸೃಷ್ಠಿಮಾಡಿ ಸರ್ವೆ ನಂ 25 ರ ಗೋಮಾಳ ಜಮೀನಿಗೆ ಇ-ಖಾತಾ ಮಾಡಿಸಿರುತ್ತಾರೆ. ಸದರಿ ಇ-ಖಾತ ಸಂಖ್ಯೆ 150200203400400047 ಆಗಿರುತ್ತದೆ. ಸರ್ವೆ ನಂ 25 ರ ಸರ್ಕಾರಿ ಆಸ್ತಿಯನ್ನು ಗ್ರಾಮಠಾಣಾ ಸ್ವತ್ತು ಎಂದು ಸುಳ್ಳು ಮಾಹಿತಿ ನೀಡಿ ತಮ್ಮ ಪತಿಯ ಹೆಸರಿಗೆ ಇ-ಖಾತಾ ಮಾಡಿಸಿರುತ್ತಾರೆ. ಸದರಿ ಸ್ವತ್ತನ್ನು ದಾನಪತ್ರದಲ್ಲಿ ಪಿತ್ರಾರ್ಜಿತ ಎಂಬುದಾಗಿ ತೋರಿಸಿದ್ದು, ಸರ್ಕಾರಿ ಆಸ್ತಿ ಇವರಿಗೆ ಪಿತ್ರಾರ್ಜಿತವಾಗಿ ಬಂದ ದಾಖಲೆಗಳನ್ನು ಪರಿಶೀಲಿಸಬೇಕು.

ದಿ॥ ಜಯಮ್ಮನವರು ಲಕ್ಷ್ಮೀಜನಾರ್ಧನ ಇವರಿಗೆ ಮಾಡಿಕೊಟ್ಟ ದಾನಪತ್ರದಲ್ಲಿ ಸದರಿ ಮೂಲದಾವಾ ಸಂಖ್ಯೆ 12/2/2013 ಎಂದು ತೋರಿಸಿದ್ದು, ಸರ್ವೆ ನಂ 25 ರ ಸರ್ಕಾರಿ ಸ್ವತ್ತನ್ನು ಗ್ರಾಮಠಾಣಾ ಎಂದು ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡಿರುತ್ತಾರೆ. ಸದರಿ ಆಸ್ತಿಗೆ ಸಂಬಂಧವೇ ಇಲ್ಲದವರ ಮೇಲೆ ದಾವೆಯನ್ನು ಸಲ್ಲಿಸಿ ರಾಜಿ ಮಾಡಿಕೊಂಡಂತೆ ಪತ್ರ ಸೃಷ್ಟಿಸಿ ಸರ್ಕಾರಿ ಸ್ವತ್ತನ್ನು ಕಬಳಿಸಿರುತ್ತಾರೆ.



ಮುಖ್ಯಾಧಿಕಾರಿ
ಪುರಸಭೆ
ಚಿಕ್ಕಬಾಣಾವರ

ನ್ಯಾಯಾಲಯದ ಆದೇಶ ಮತ್ತು ದಾಖಲೆಗಳಲ್ಲಿ ಗ್ರಾಮಠಾಣಾ ಆಸ್ತಿ ಸಂಖ್ಯೆ 42/43 ಎಂದು ನ್ಯಾಯಾಲಯಕ್ಕೆ ಮತ್ತು ಇತರ ಸರ್ಕಾರಿ ಇಲಾಖೆಗಳಿಗೆ ಹಾಗೂ ನ್ಯಾಯಾಲಯಕ್ಕೆ ಸುಳ್ಳು ಮಾಹಿತಿಯನ್ನು ನೀಡಿರುತ್ತಾರೆ. ಆದರೆ ಅದು ವಾಸ್ತವವಾಗಿ ಸರ್ವೆ ನಂ 25 ರ ಸರ್ಕಾರಿ ಜಮೀನು ಆಗಿರುತ್ತದೆ, ಗ್ರಾಮಠಾಣಾ ವ್ಯಾಪ್ತಿಯಲ್ಲಿ ಬರುವುದಿಲ್ಲ.

ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯತಿಯ ಅಧಿಕಾರಿಗಳು ಸರ್ಕಾರಿ ಆಸ್ತಿಯನ್ನು ಕಬಳಿಸಲು ಇವರಿಗೆ ಸಹಕರಿಸಿ, ಇ-ಸ್ವತ್ತು ಮಾಡಿಕೊಟ್ಟಿರುತ್ತಾರೆ. ಇವರಿಗೆ 193.98 ಚದರ ಮೀಟರ್ (2087.9 ಚದರ ಅಡಿ) ಜಾಗಕ್ಕೆ ಇ-ಖಾತೆಯನ್ನು ಗ್ರಾಮ ಪಂಚಾಯತಿ ವತಿಯಿಂದ ನಿಯಮಬಾಹಿರವಾಗಿ ಮಾಡಿಕೊಡಲಾಗಿರುತ್ತದೆ.

ಪ್ರಸ್ತುತ ಸದರಿ ಸ್ವತ್ತು ಚಿಕ್ಕಬಾಣಾವರ ಪುರಸಭೆಯ ವ್ಯಾಪ್ತಿಯಲ್ಲಿ ಬರುತ್ತಿದ್ದು ಸದರಿ ಇ-ಖಾತೆಯನ್ನು ವಜಾ ಮಾಡುವಂತೆ ಮನವಿಯನ್ನು ಮಾಡಿದ್ದರೂ ಇಲ್ಲಿಯವರೆಗೂ ಇ-ಖಾತೆಯನ್ನು ವಜಾ ಮಾಡಿರುವುದಿಲ್ಲ. ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಬೆಂಗಳೂರು ಉತ್ತರ ತಹಶೀಲ್ದಾರರಿಗೆ ದೂರು ನೀಡಿದ್ದು, ಅವರು ಸಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

2. (ಅ) ಭೂಮಿಯ ಮೌಲ್ಯ : ಸುಮಾರು 80 ಲಕ್ಷ ರೂಪಾಯಿಗಳು

(ಆ) ಸದರಿ ಭೂಮಿಯ ಮೇಲೆ ಮನೆ ಅಥವಾ ಇತರ ಕಟ್ಟಡಗಳು ಇವೆಯೇ ? ಅವು ಯಾರಿಗೆ ಸಂಬಂಧಿಸಿವೆ, ಅವುಗಳನ್ನು ಹೇಗೆ ಪಡೆದುಕೊಂಡಿದ್ದಾರೆ ಮತ್ತು ಆ ಜಮೀನಿನ ಒಟ್ಟು ಮಾರುಕಟ್ಟೆ ಬೆಲೆ. : ಮನೆಗಳನ್ನು ನಿರ್ಮಾಣ ಮಾಡಲಾಗಿದೆ

ಸದರಿ ಕಟ್ಟಡಗಳು ಲಕ್ಷ್ಮೀಜನಾರ್ಧನ ಇವರಿಗೆ ಸೇರಿವೆ ಸುಳ್ಳು ದಾಖಲೆಗಳನ್ನು ಸೃಷ್ಟಿಸುವ ಮೂಲಕ ಪಡೆದು ಕೊಂಡಿದ್ದಾರೆ.

ಆ ಜಮೀನಿನ ಒಟ್ಟು ಮಾರುಕಟ್ಟೆ ಬೆಲೆ ಅಂದಾಜು 80 ಲಕ್ಷ ರೂ

3. ವ್ಯಾಜ್ಯದ ಕಾರಣ : ಸರ್ಕಾರಿ ಜಾಗವನ್ನು ಗ್ರಾಮಠಾಣಾ ಜಾಗವೆಂದು ಸುಳ್ಳು ದಾಖಲೆ ಸೃಷ್ಟಿಸಿ ಭೂ ಕಬಳಿಕೆ ಮಾಡಿರುವುದು.

ಮುಖ್ಯಾಧಿಕಾರಿ
ಪುರಸಭೆ
ಚಿಕ್ಕಬಾಣಾವರ

"ಇವರಿಗೆ"
ಮುಖ್ಯಾಧಿಕಾರಿ ರವರು
ಪುರಸಭಾ ಕಾರ್ಯಾಲಯ
ಚಿಕ್ಕಬಾಣಾವರ
ಬೆಂಗಳೂರು ಉತ್ತರತಾಲ್ಲೂಕು
ಬೆಂಗಳೂರು ನಗರಜಿಲ್ಲೆ-560090

ದಿನಾಂಕ - 23-02-2022 (10)

"ರಿಂದ"
ನಾಗರಾಜು.ಎಂ ಬಿನ್ ಲೇ ಮುನಿಯಪ್ಪ
ಸೋಮಶೆಟ್ಟಿಹಳ್ಳಿ, ಮ.ನಂ-1/5ರ ನಿವಾಸಿ,
ಆಂಜನೇಯ ದೇವಸ್ಥಾನ ರಸ್ತೆ,
ಚಿಕ್ಕಬಾಣಾವರ ಹೋಬಳಿ, ಯಶವಂತಪುರ ಹೋಬಳಿ,
ಬೆಂಗಳೂರು ಉತ್ತರ ತಾಲ್ಲೂಕು,
ಬೆಂಗಳೂರು-560090,

ಕ್ರ ಸಂ ಖಂಡಿ - 2

ವಿಷಯ: ಸೋಮಶೆಟ್ಟಿಹಳ್ಳಿ ಗ್ರಾಮ ವ್ಯಾಪ್ತಿಯ ಪಂಚಾಯ್ತಿ ದಾಖಲೆಗಳ ಸ್ವಚ್ಛತೆ ರಾಗಿ ದಾಖಲೆಗಳಲ್ಲಿ ನಮೂದಿಸಿರುವ ಖಾತೆಗಳು ನಂ-1 ರಿಂದ 100ರ ವರೆಗೆ ವಿಳಾಸ (location) ಗಳನ್ನು ಪತ್ತೆ ಮಾಡಿ ಕೊಡಲು ಮನವಿ ಅರ್ಜಿ ಕುರಿತು ಬಗ್ಗೆ.

ಸ್ವಾಮಿ:- ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸೋಮಶೆಟ್ಟಿಹಳ್ಳಿ ಗ್ರಾಮದ ನಿವಾಸಿ ನಾಗರಾಜು.ಎಂ ಆದ ನಾನು ತಮಗೆ ತಿಳಿಸುವುದೇನೆಂದರೆ, ಈಗಾಗಲೇ ಸೋಮಶೆಟ್ಟಿಹಳ್ಳಿ ಗ್ರಾಮ ಪಂಚಾಯ್ತಿಯನ್ನು ತಮ್ಮ ಪುರಸಭಾ ಕಾರ್ಯಾಲಯಕ್ಕೆ ಹಸ್ತಾಂತರವಾಗಿರುತ್ತದೆ.

ಆದಾಗಿ ಇದೇ ಪುಟ್ಟಗಳ ಗ್ರಾಮ ಪಂಚಾಯ್ತಿಯಿಂದ ಸೋಮಶೆಟ್ಟಿಹಳ್ಳಿ ಗ್ರಾಮ ಪಂಚಾಯ್ತಿಗೆ ನಮೂನೆ 11ರ ದಾಖಲೆಗಳು (ನಮೂನೆ-9 ಹಸ್ತಾಂತರವಾಗಿರುವುದಿಲ್ಲ) ಆದ ಕಾರಣದಿಂದ ಸೋಮಶೆಟ್ಟಿ ಗ್ರಾಮದ ಕೆಲ ಅಪ್ರಾಮಾಣಿಕ ವ್ಯಕ್ತಿಗಳು ಸೋಮಶೆಟ್ಟಿಹಳ್ಳಿ ಗ್ರಾಮ ಪಂಚಾಯ್ತಿ ಅಧಿಕಾರಿಗಳೊಂದಿಗೆ ಸಾಮೀಲಾಗಿ ಸೇರಿಕೊಂಡು ನಕಲಿ ಪಂಚಾಯ್ತಿ ಸರ್ಟಿಫಿಕೇಟ್ ದಾಖಲೆ/ಇತರೆ ನಕಲಿ ದಾಖಲೆ ಸೃಷ್ಟಿಸಿ ಗ್ರಾಮದ ಸ್ವಾಭಾವಿಕ ಸ್ವತ್ತನ್ನು ಭೂಕಬಳಿಸಿ ಅಕ್ರಮ ಇ-ಸ್ವತ್ತು ನಮೂನೆ-11 ಮತ್ತು ನಮೂನೆ-9 ಖಾತೆಗಳನ್ನು ಮಾಡಿಕೊಂಡಿರುವುದನ್ನು ನಮಗೆ ತಿಳಿದು ಬಂದಿರುತ್ತದೆ. ಮುಂದಿನ ಕ್ರಮಕ್ಕಾಗಿ ಹಲವಾರಿ ಬದ್ಧರಾದ ನಾವು ಗ್ರಾಮದ ನಮೂನೆ-11 ರ ಪಟ್ಟಿಯಲ್ಲಿ ಚಕ್ಕುಬಂದಿ ಇಲ್ಲದ ಕಾರಣ ತಾವುಗಳು ಸ್ಥಳ ಪರಿಶೀಲಿಸಿ ಖಾತೆ ನಂ-1 ರಿಂದ 100 ರ ವರೆಗೆ ಇರುವ ನಮೂದಿಸಿರುವ ಮನೆಗಳ ವಿಳಾಸಗಳಿಗೆ GPS co-ordinates ಆಧಾರದ ಚಕ್ಕುಬಂದಿ ಗುರುತಿಸಿ ಪತ್ತೆ ಮಾಡಿ ನಮಗೆ ಹಿಂಬರಹ ಪ್ರತಿಯನ್ನು ನೀಡಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ತಮ್ಮಲ್ಲಿ ಈ ಮನವಿಯ ಮೂಲಕ ಕೇಳಿಕೊಳ್ಳುತ್ತೇನೆ. ಧನ್ಯವಾದಗಳೊಂದಿಗೆ

ಇಂತಿ ನಿಮ್ಮ ವಿಶ್ವಾಸಿ
ನಾಗರಾಜು.ಎಂ

ಮುಖ್ಯಾಧಿಕಾರಿ
ಪುರಸಭೆ